16

# “ನನ್ನ ರಾಜ್ಯವು ಈ ಲೋಕದ್ದಲ್ಲ”

ಸನ್ಹೆದ್ರಿನ್ ಸಭೆಯ ಮುಂದೆ ನ್ಯಾಯ ವಿಚಾರಣೆಯಲ್ಲಿ ಯೇಸುವಿನ ಮೇಲೆ ದೇವದೂಷಣೆ ಮಾಡಿದ ಅಪರಾಧ ಹೊರಿಸಲ್ಪಟ್ಟಿತ್ತು (ಮತ್ತಾಯ 26:65). ಆತನು ನ್ಯಾಯಾಲಯದ ಮುಂದೆ ತರಲ್ಪಟ್ಟಾಗ, ಹೊಸ ಆರೋಪಣೆಯ ಅಗತ್ಯತೆಯಿತ್ತು. “ಇವನು ತಾನೇ ಕ್ರಿಸ್ತನೆಂಬ ಒಬ್ಬ ಅರಸನಾಗಿದ್ದೇನೆಂದು ಹೇಳುತ್ತಾ ಕೈಸರನಿಗೆ ತೆರಿಗೆ ಕೊಡಬಾರದೆಂದು ಬೋಧಿಸುತ್ತಾ ನಮ್ಮ ದೇಶದವರ ಮನಸ್ಸನ್ನು ಕೆಡಿಸುವದನ್ನು ನಾವು ಕಂಡೆವು ಎಂಬುದಾಗಿ ಆತನ ಮೇಲೆ ದೂರು ಹೇಳುವದಕ್ಕೆ ತೊಡಗಿದರು” (ಲೂಕ 23:2). ನ್ಯಾಯ ವಿಚಾರಣೆಯ ಸಮಯದಲ್ಲಿ “ನೀನು ಯೆಹೂದ್ಯರ ಅರಸನೋ?” ಎಂದು ಪಿಲಾತನು ಯೇಸುವನ್ನು ಕೇಳಿದನು. “ನನ್ನ ರಾಜ್ಯವು ಈ ಲೋಕದ್ದಲ್ಲ” ಎಂದು ಯೇಸು ಉತ್ತರ ಕೊಟ್ಟನು (ಯೋಹಾನ 18:33-37 ನೋಡಿರಿ).

ರಾಜ್ಯವು ಈ ಲೋಕದ್ದಾಗಿರುವದಿಲ್ಲ ಎಂಬ ಆತನ ಘೋಷಣೆಗೆ ಒತ್ತು ಕೊಡುವ ಕ್ರಿಸ್ತನ ರಾಜ್ಯದ ಪ್ರಾಮುಖ್ಯವಾದ ಗುಣಲಕ್ಷಣಗಳನ್ನು ಸುವಾರ್ತಾ ದಾಖಲೆಗಳು ಪ್ರಕಟಿಸುತ್ತವೆ.

## ಲೋಕ ವ್ಯವಹಾರದ ರಾಜ್ಯವಲ್ಲ

ಕ್ರಿಸ್ತನ ರಾಜ್ಯವು ತನ್ನ ಸ್ವಭಾವದಲ್ಲಿ ಈ ಲೋಕದ್ದಾಗಿರುವದಿಲ್ಲ. ಅದು ಪುರಜನರದ್ದಾಗಿರುವದಿಲ್ಲ. ಕ್ರಿಸ್ತನು ಲೌಕಿಕ ರಾಜನಾಗಿರುವದಿಲ್ಲ; ಆದುದರಿಂದ ಆತನು ಕೈಸರನ ವಿರೋಧಿಯಾಗಿರುವದಿಲ್ಲ. ಅದು “ದೇವರ ರಾಜ್ಯವು ತಿನ್ನುವುದೂ ಕುಡಿಯುವುದೂ ಆಗಿರುವದಿಲ್ಲ” (ರೋಮಾಪುರ 14:17) ಎಂದು ಪೌಲನು ಹೇಳಿದಂತೆ ಅದೆ. “ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದ್ದಲ್ಲ” (ಲೂಕ 17:20) ಎಂದು ಯೇಸು ಹೇಳಿದನು. ಅದರ ಸಹಜ ಗುಣವು ಆತ್ಮಿಕವಾದದ್ದು, ಆದರೆ ಭೌತಿಕವಾದದ್ದಾಗಿರುವದಿಲ್ಲ. ಇದು ಭಾವನೆಯನ್ನು ರಾಜ್ಯದ ಸ್ವಭಾವದ ಪ್ರಿಮಿಲ್ಲೆನಿಯಲಿಜಮ್ ತಿರಸ್ಕರಿಸುತ್ತದೆ.

ಕ್ರಿಸ್ತನ ರಾಜ್ಯದ ಲಕ್ಷಣವು ಅದು ಭೂಲೋಕದ ರಾಜ್ಯಗಳೊಂದಿಗೆ ಒಂದುಗೂಡಿಸಲ್ಪಡಬಾರದೆಂಬ ಸಂಗತಿಯನ್ನು ಒತ್ತಿ ಹೇಳುತ್ತದೆ. ಸಭೆ ಮತ್ತು ದೇಶವು ಬೇರೆಬೇರೆಯಾಗಿ ಇಡಲ್ಪಡಬೇಕು. ಎರಡೂ ಮಿಶ್ರವಾಗಲಾರವು. ಅವು ತಮ್ಮ ತಿರುಳಿನಲ್ಲಿಯೇ ಭಿನ್ನವಾಗಿರುವವು. ಒಬ್ಬನು ಎರಡೂ ರಾಜ್ಯಗಳ ನಾಗರಿಕನಾಗಿರಬಹುದು. ಅವನು ಕೈಸರನಿಗೆ ಕೊಡಬೇಕಾದ್ದನ್ನು ಕೈಸರಿನಿಗೂ ದೇವರಿಗೆ ಕೊಡಬೇಕಾದದ್ದನ್ನು ದೇವರಿಗೂ ಕೊಡಬೇಕಾಗುತ್ತದೆ (ಮತ್ತಾಯ 22:17-21; ರೋಮಾಪುರ 13:7; 1 ಪೇತ್ರ 2:17).

ಕೇವಲ ಲೌಕಿಕ ಮಾತುಗಳಲ್ಲಿ ಯೋಚಿಸಿದ ಪಿಲಾತನಿಗೆ ಯೇಸುವಿನ ಉತ್ತರವು ಯಾವ ಅರ್ಥಕೊಡಲಿಲ್ಲ, “ಹಾಗಾದರೇ ನೀನು ಅರಸನೋ?” ಎಂದು ಪ್ರಶ್ನಿಸಿದನು (ಯೋಹಾನ 18:37). ಈ ರಾಜ್ಯದ ಬಗ್ಗೆ ಮಹಾ ಸತ್ಯಗಳು ಪ್ರಾಪಂಚಿಕ ಮಾತುಗಳಲ್ಲಿ

ಮಾತ್ರವೇ ಯೋಚಿಸುವವನಿಗೆ ಯಾವ ಅರ್ಥವಾಗುವದಿಲ್ಲ.

## ಲೋಕದ ಚಾತುರ್ಯದವುಗಳದ್ದಲ್ಲ

ಕ್ರಿಸ್ತನ ರಾಜ್ಯವು ಅದು ಉಪಯೋಗಿಸುವ ಚಾತುರ್ಯಗಳಲ್ಲಿ ಈ ಲೋಕದ್ದಲ್ಲ. ಅದಕ್ಕೆ ಸಂಬಂಧಿಸಿದ ಹೆಚ್ಚಾದ ವಿಷಯಗಳಲ್ಲಿ ದೈವಿಕ ವಾಗ್ದಾನವು ಲೌಕಿಕ ಜ್ಞಾನವು ನಿರ್ದೇಶಿಸುವಂಥದ್ದಕ್ಕೆ ವಿರುದ್ಧವಾದ ರೀತಿಯಲ್ಲಿರುತ್ತದೆ.

ಅರಸನ ಜನನ ಮತ್ತು ಆತನ ಕುಟುಂಬ ಜೀವನದ ವಾತಾವರಣವು ನಿರೀಕ್ಷಿಸ ಬಹುದಾದ್ದದಕ್ಕಿಂತ ಬಹಳ ಭಿನ್ನವಾಗಿದ್ದವು. ಆತನನ ಜನನದ ಸ್ಥಳವು ಎಷ್ಟು ಅಲ್ಪವಾದದ್ದು, ದೀನತೆಯುಳ್ಳದ್ದು, ಕನಿಷ್ಠವಾದದ್ದು ಆಗಿತ್ತು. ಆತನಿಗೆ ಅರಮನೆಯಿರಲಿಲ್ಲ. ಅವನು ಒಂದು ಪಟ್ಟಣವನ್ನು ಪ್ರವೇಶಿಸಿದಾಗ ವಾದ್ಯಗಳ ಮೆರವಣಿಗೆಯಿರಲಿಲ್ಲ. ಆತನ ಪರಿಚಾರಕರಾಗಿ ಗಣ್ಯರೂ ಮಹಿಳೆಯರೂ ಇರಲಿಲ್ಲ. ಗಣನೆಗೆ ಬಾರದ "ನಜರೇತಿನಿಂದ ಒಳ್ಳೇದೇನಾದರೂ ಬರುವುದೋ?" (ಯೋಹಾನ 1:46) ಎಂದು ನತಾನಯೇಲನು ತನ್ನ ದಿನದ ಸಾಮಾನ್ಯ ಭಾವನೆಯನ್ನು ವ್ಯಕ್ತಪಡಿಸಿದನು.

ತನ್ನ ರಾಜ್ಯವು ಪ್ರಾರಂಭಿಸುವಿಕೆಯಲ್ಲಿ ಸಹಾಯ ಮಾಡಲು ಯೇಸು ಒಂದು ಗುಂಪನ್ನು ಆಯ್ಕೆಮಾಡಿಕೊಂಡನು. ಆತನು ಐಶ್ವರ್ಯವಂತರನ್ನು, ತತ್ವಜ್ಞಾನಿಗಳನ್ನು ಇಲ್ಲವೇ ಗಣನೀಯ ವ್ಯಕ್ತಿಗಳನ್ನು ಆಯ್ದುಕೊಳ್ಳಲಿಲ್ಲ. ಆದರೆ ಸಾಮಾನ್ಯ ಜೀವನ ನಡಿಸುತ್ತಿದ್ದ ಬಡವರನ್ನು ಆಯ್ದುಕೊಂಡನು. ಬೇಗನೇ ಲೋಕದ ಪ್ರಭಾವವುಳ್ಳ, ಐಶ್ವರ್ಯ ಮತ್ತು ಪ್ರಖ್ಯಾತಿಯುಳ್ಳವರು ಆತನಿಗೆ ವಿರುದ್ಧವಾಗಿ ಒಂದಾಗಿ ನಿಂತುಕೊಂಡರು (ಅಪೊಸ್ತಲರ ಕೃತ್ಯ 4:26, 27). ಲೋಕದ ಜ್ಞಾನವು ಆಯ್ದುಕೊಳ್ಳಬಹುದಾದ ಗುಂಪಿಗಿಂತ ಯೇಸು ಆಯ್ದುಕೊಂಡ ಗುಂಪು ಹೇಗೆ ಭಿನ್ನವಾಗಿತ್ತಲ್ಲವೇ! ಲೋಕದ ದೃಷ್ಟಿಯಿಂದ ಅವರಿಗೆ ಜಯ ಹೊಂದುವ ಯಾವುದೇ ಅವಕಾಶವಿರಲಿಲ್ಲ.

ಯೆರೂಸಲೇಮಿನಲ್ಲಿ ಪ್ರಾರಂಭವಾದ ದಿನವನ್ನು ಯೋಚಿಸೋಣ (ಅಪೊಸ್ತಲರ ಕೃತ್ಯ 2). ಅಲ್ಲಿ ಅಪೊಸ್ತಲರು ತಮ್ಮ ಜಯದ ಮೊದಲನೆಯ ಪ್ರಸಂಗ ಪ್ರಸಂಗಿಸಿದನು. ಮುಂದಿನ ಅರ್ಧ ಶತಮಾನದ ಮುಖಾಂತರ ನಾವು ಅವರನ್ನು ಹಿಂಬಾಲಿಸುವಾಗ, ಸಾಸಿವೆಕಾಳು ಮರವಾಗಿ ಬೆಳೆದದ್ದನ್ನು ನೋಡುವೆವು (ಮತ್ತಾಯ 13:31, 32) ಎಂಥಾ ಅದ್ಭುತಕರವಾದ ಯಶಸ್ಸು! ಅವರ ಬಲವು "ಜಗತ್ತಿನದಾಗಿತ್ತೋ"? ಅದು ಹಾಗಿರಲೇ ಇಲ್ಲ! ಮಾನವನನ್ನು ಮೀರಿದ ಹೆಚ್ಚಿನ ಶಕ್ತಿ ಅವರ ಪ್ರಯತ್ನಗಳ ಹಿಂದೆ ಇತ್ತು. ಪ್ರಥಮ ಶತಮಾನದ ಯಶಸ್ಸಿಗಾಗಿ ಅರ್ಥ ಮಾಡಿಕೊಳ್ಳಬಹುದಾದ ಒಂದೇ ಒಂದು ವಿವರಣೆಯು ಇರುವುದು. ಅದೇನೆಂದರೆ, "ಈ ಲೋಕದ್ದು ಅಲ್ಲದ" ಸಂದೇಶವನ್ನು ಅವರು ಪ್ರಸಂಗಿಸಿದ ಸಂಗತಿಯು, ತಮ್ಮ ಯಶಸ್ಸಿಗಾಗಿ "ಈ ಲೋಕದ್ದು ಅಲ್ಲದ" ಬಲವನ್ನು ಅವರು ಅವಲಂಬಿಸಿದ್ದರು.

ಈ ರಾಜ್ಯದೊಳಗೆ ಪ್ರವೇಶದ ಶರತ್ತುಗಳು ಯಾವುದು? ಅದರ ಪ್ರಾರಂಭದ ದಿನದಲ್ಲಿ ಪೇತ್ರನು ತನ್ನ ಪ್ರಸಂಗದಿಂದ ಭರವಸೆ ಹೊಂದಿದ ಮತ್ತು ತಪ್ಪಿನ ಅರುಹನ್ನು ಪಡೆದ ಜನರಿಗೆ "ಮಾನಸಾಂತರ ಪಡಿರಿ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ಯೇಸುಕ್ರಿಸ್ತನಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ ..." (ಅಪೊಸ್ತಲರ ಕೃತ್ಯ 2:38) ಎಂದು ಹೇಳಿದನು. ನಿಶ್ಚಿತವಾಗಿಯೂ ಲೋಕದ ಜ್ಞಾನವು ದೇವರ ರಾಜ್ಯದೊಳಗಿನ ಮಾರ್ಗದಂತೆ ವಿಶ್ವಾಸದ, ಮಾನಸಾಂತರದ ಮತ್ತು ಬಾಪ್ತಿಸ್ಮದ ಮಾರ್ಗವನ್ನು ಸೂಚಿಸಲಿಲ್ಲ. ಮಾನವ ಜ್ಞಾನವು ಬಾಪ್ತಿಸ್ಮವನ್ನು ಸೂಚಿಸಿರಲಾರದು! ಬಾಪ್ತಿಸ್ಮದ ಕಾರ್ಯದಂತೆ

ಬಾಪ್ತಿಸ್ಮಕ್ಕೆ ವಿರುದ್ಧವಾಗಿ ಅದು ದಂಗೆಯೇಳುತ್ತದೆ, ಹೀಗಿದ್ದರೂ, ಯೆರೂಸಲೇಮಿನಲ್ಲಿ ಮಾತ್ರವೇ ಅಲ್ಲ ಆದರೆ ಪ್ರತಿಯೊಂದು ಸ್ಥಳದಲ್ಲಿ ಆದಿ ಶಿಷ್ಯರಿಂದ ಮುಂದಿಡಲ್ಪಟ್ಟ ಯೋಜನೆ ಇದಾಗಿತ್ತು (ಅಪೊಸ್ತಲರ ಕೃತ್ಯ 8:12, 38; 9:18; 10:48; 16:31-34; 18:8; 19:5). ಅದು "ಈ ಲೋಕದ್ದು ಆಗಿರದ" ರಾಜ್ಯವಾಗಿತ್ತು.

ಇದಲ್ಲದೇ, ಆದಿ ಶಿಷ್ಯರು ಒಂದು ಸ್ಮಾರಕವನ್ನು, ಅರಸನ ಮರಣದ ಸ್ಮರಣೆಗಾಗಿರುವ ಕಾರ್ಯವನ್ನು ಆಚರಿಸುತ್ತಿದ್ದರು. ಅದು ಸಾಧಾರಣವಾದ ಭೋಜನ, ಕರ್ತನ ಭೋಜನ (ಲೂಕ 22:29, 30; ಅಪೊಸ್ತಲರ ಕೃತ್ಯ 20:7; ಮಾರ್ಕ 14:22-24). ಆತನ ದೇಹದ ಸ್ಮರಣೆಗಾಗಿ ರೊಟ್ಟಿ ಮತ್ತು ಆತನ ರಕ್ತದ ಸ್ಮರಣೆಗಾಗಿ ದ್ರಾಕ್ಷಾರಸ. ಇದು ಮಾನವ ಜ್ಞಾನವು ಸ್ಥಾಪಿಸಿದ ಸ್ಮರಣೆಯ ವಿಧಾನವಾಗಿರುವುದೋ? ಕರ್ತನ ಭೋಜನವು ಮಾನವನಿಂದ ಪ್ರಾರಂಭಿಸಲ್ಪಡಲಿಲ್ಲವೆಂದು ತೀಮಾನಿಸಬೇಕಾಗುತ್ತದೆ. ಅದು ಮಾನವನದಲ್ಲ ಆದರೆ ದೈವಿಕವಾದದ್ದಾಗಿದೆ!

ದೇವರ ಕಾರ್ಯಾಚರಣೆಯಲ್ಲಿ ಪ್ರಕಟವಾಗಿರುವ ಮಹಾ ಸೂತ್ರದ ಮೇಲೆ ಪೌಲನು ವ್ಯಾಖ್ಯಾನಿಸಿದ್ದಾನೆ.

> ದೇವರು ಜ್ಞಾನಿಗಳನ್ನು ನಾಚಿಕೆಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿ ಕೊಂಡಿದ್ದಾನೆ; ದೇವರು ಬಲಿಷ್ಠರನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ. ... ಗಣ್ಯರನ್ನು ಇಲ್ಲದಂತೆ ಮಾಡುವದಕ್ಕಾಗಿ ಗಣನೆಗೆ ಬಾರದವರನ್ನು ಆರಿಸಿ ಕೊಂಡಿದ್ದಾನೆ. ಹೀಗಿರಲು ದೇವರ ಮುಂದೆ ಹೊಗಳಿ ಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ (1 ಕೊರಿಂಥ 1:27-29).

"ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ" (1 ಕೊರಿಂಥ 1:18) ಎಂದೂ ಅವನು ಬರೆದನು. ಕ್ರಿಸ್ತನ ರಾಜ್ಯವು ಅನೇಕರಿಗೆ ಎಡಹುವ ಬಂಡೆಯಾಗಿದೆ ಯಾಕಂದರೆ ಅದು ಅವರ ಜ್ಞಾನದ ಮಟ್ಟಕ್ಕೆಸರಿಯಾಗಿ ಅಳೆಯಲ್ಪಡಲಿಲ್ಲ. "ಈ ಲೋಕದ್ದು ಆಗಿರದೆ ಇರುವ" ಈ ರಾಜ್ಯದಲ್ಲಿ ಜ್ಞಾನಿಗಳಿಗೆ ಹುಚ್ಚುತನವಾಗಿರುವ ಆಯ್ಕೆಗಳನ್ನು ಮಾಡಿದ್ದಾನೆಂಬುದನ್ನು ಯಾವಾಗಲೂ ಜ್ಞಾಪಿಸಿಕೊಳ್ಳೋಣ.

## ಇಹಲೋಕದ ಗುರಿಯಿಲ್ಲದ್ದು

ಕೊನೆಯದಾಗಿ, ರಾಜ್ಯವು ಅದರ ಅಂತಿಮ ಗುರಿ ಈ ಲೋಕದ್ದಾಗಿರುವದಿಲ್ಲ. ಇದು "ಎಂದೆಂದೂ ನಾಶಪಡಿಸಲ್ಪಡದ" ಆದರೆ "ಸದಾಕಾಲಕ್ಕೂ ಇರುವ" (ದಾನಿಯೇಲ 2:44) ರಾಜ್ಯವಾಗಿರುವುದು. "ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ" ಎಂದು ಲೂಕ 1:33 ಹೇಳುತ್ತದೆ. "ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದಿದ್ದೇವೆ" ಎಂದು ಇಬ್ರಿಯ 12:28ರಲ್ಲಿ ನಾವು ಓದುತ್ತೇವೆ. ಕದಲಿಸಲ್ಪಡುತ್ತಿರುವ ರಾಜ್ಯಗಳ ಮತ್ತು ತಾತ್ಕಾಲಿಕವಾಗಿರುವ ಬಲಗಳ ಮಧ್ಯದಲ್ಲಿ, ಜಗತ್ತು ಬೆಂಕಿಯಲ್ಲಿರುವಾಗ ಮತ್ತು ಮೂಲವಸ್ತುಗಳು ಅತಿಯಾದ ಉಷ್ಣತೆಯಿಂದ ಕರಗಿ ಹೋಗುತ್ತಿರುವಾಗ ಉಳಿದುಕೊಳ್ಳುವ ರಾಜ್ಯವಿದೆಯೆಂಬುದನ್ನು ತಿಳಿದು ಕೊಳ್ಳುವುದು ಆದರಣೆ ಕೊಡುವಂಥದ್ದಾಗಿದೆ.

## ಮುಕ್ತಾಯ

ಈ ರಾಜ್ಯದಲ್ಲಿ ಪೌರತ್ವದ ಸದವಕಾಶವು ನೀವು ಅಪೇಕ್ಷಿಸಿದರೆ ನಿಮ್ಮದಾಗಿರುವುದು. ಪ್ರವೇಶದ ಶರತ್ತುಗಳು ರಾಜ್ಯವು ಸ್ಥಾಪಿಸಲ್ಪಟ್ಟಾಗ ಇದ್ದವುಗಳೇ ಆಗಿವೆ. ಆ ಶರತ್ತುಗಳು ಯಾವವು? ಒಬ್ಬನು ಕ್ರೈಸ್ತನಾಗುವಾಗ ಅವನು ರಾಜ್ಯವನ್ನು ಪ್ರವೇಶಿಸುವನು. "ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕಾಗಿ ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟತಕ್ಕದ್ದು" ಎಂದು ಯೇಸು ಹೇಳಿದನು (ಯೋಹಾನ 3:5). "ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು" (ಮಾರ್ಕ 16:16) ಎಂದು ತನ್ನ ಸೇವೆಯ ಅಂತ್ಯದಲ್ಲಿ ಆತನು ಹೇಳಿದಾಗ ಆತನು ಅದನ್ನು ಬೇರೆ ರೀತಿಯಲ್ಲಿ ಹೇಳಿದನು.

© 2009 Truth for Today